ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿರುವ ಮ್ಯಾನೇಜ್‌ಮೆಂಟ್ ಶಾಲೆಗಳ Corporate Social Responsibility (CSR) ಅಂದರೆ, 'ಉದ್ಯಮಿಗಳ ಸಾಮಾಜಿಕ ಜವಾಬ್ದಾರಿ'ಯ ವಿಚಾರಸರಣಿಯು, ಉದ್ಯಮಿಗಳಲ್ಲಿ ಕೆಲವರಲ್ಲಾದರೂ ಶೋಷಿತ ಸಮಾಜದ ಬಗ್ಗೆ ಉತ್ತರದಾಯಿತ್ವ ಹಾಗೂ ಸಾಮಾಜಿಕ ಪ್ರಜ್ಞೆ ಜಾಗೃತವಾಗಿರುವುದರ ಆಶಾದಾಯಕ ಸಂಕೇತವಾಗಿದೆ. ಇದರಿಂದ ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಗೆ ಸ್ವಲ್ಪವಾದರೂ ದಾರಿ ಮಾಡಿಕೊಟ್ಟಂತಾಗುತ್ತದೆ.

### ದೌರ್ಜನ್ಯವನ್ನು ಎದುರಿಸುವ ನೈತಿಕ ಶಕ್ತಿ

ದುರಂತವೆಂದರೆ, ಆಧುನಿಕತೆ ಹೆಚ್ಚಾಗುತ್ತಿದ್ದಂತೆ ನಮ್ಮ ತಿಳಿವಳಿಕೆ ಮತ್ತೂ ಹಿಂದೆ ಸರಿಯುತ್ತಿದೆ. ಈ ಯಾಂತ್ರಿಕ ಯುಗದಲ್ಲಿ ವ್ಯಷ್ಟಿಪ್ರಜ್ಞೆಯಲ್ಲಿ ವ್ಯಕ್ತಿಗಳ ಮತ್ತು ಸಮಷ್ಟಿಪ್ರಜ್ಞೆಯ ದೃಷ್ಟಿಯಲ್ಲಿ ಬಲಿಷ್ಠ ರಾಷ್ಟ್ರಗಳ ವಿಪರೀತ ಸ್ವಾರ್ಥಲಾಲಸೆಯಿಂದ, ಆಕ್ಟೋಪಸ್‌ನಂತಿರುವ ಶೋಷಣೆಯ ಕಬಂಧಬಾಹುಗಳು ಸಾಮಾನ್ಯಜನರ ಅರಿವಿಗೇ ಬಾರದಂತೆ, ಸೂಕ್ಷ್ಮ ರೀತಿಯಲ್ಲಿ ಹೆಚ್ಚು ವ್ಯಾಪಕವಾಗುತ್ತ ಎಲ್ಲೆಡೆ ಹರಡುತ್ತ ಹೋಗುತ್ತಿವೆ. ಪಟ್ಟಭದ್ರ ಹಿತಾಸಕ್ತಿಯ ಪ್ರಭಾವಿವ್ಯಕ್ತಿಗಳೇ ಆಗಿರಬಹುದು ಅಥವಾ ರಾಜಕೀಯ ಪಕ್ಷಗಳು ಮತ್ತು ಕಪಟ ಸಾಮಾಜಿಕ ಸಂಸ್ಥೆಗಳೇ ಆಗಿರಬಹುದು, ಜನಸಾಮಾನ್ಯರ ದುಡಿಮೆಯ ಸಂಪತ್ತನ್ನು ಸಾರಾಸಗಟಾಗಿ ದೋಚಿ, ಬಲಾಢ್ಯರಾಗಿ, ಸಮಾಜದ ಅತ್ಯಂತ ಕೆಳಸ್ತರದವರನ್ನು ಕನಿಷ್ಠ ಅಗತ್ಯಗಳಿಂದಲೂ ವಂಚಿಸಲು ಹಿಂದೆ ಮುಂದೆ ನೋಡದ ಒಂದು ನಿರ್ದಯ, ಅಮಾನವೀಯವಾದ ಜಾಲವನ್ನೇ ಹರಡುತ್ತ ಇರುವುದು ಕಟುಸತ್ಯ. ಆದರೆ ಶೋಷಿತರಾದವರು ಶೋಷಕರನ್ನು ಎದುರು ಹಾಕಿಕೊಳ್ಳುವಲ್ಲಿ ಅಗಾಧ ನೈತಿಕಶಕ್ತಿಯನ್ನು ತೋರಿಸಿರುವ ನಿದರ್ಶನಗಳೂ ಜಗತ್ತಿನ ಇತಿಹಾಸದಲ್ಲಿ ನಮಗೆ ಅಲ್ಲಲ್ಲಿ ದೊರೆಯುತ್ತವೆ. ಇಂದಿನ ಕಾಲದಲ್ಲಿಯೂ ನಾಡಿನ ಪ್ರಜ್ಞಾವಂತರೆನ್ನಿಸಿಕೊಂಡ ಕೆಲವರಲ್ಲಾದರೂ, ಜನಸಾಮಾನ್ಯರ ನೋವುಸಂಕಟಗಳಿಗೆ ದನಿಯನ್ನು ನೀಡಿ, ನೈತಿಕ ಧೈರ್ಯವನ್ನು ಪ್ರಕಟಿಸುವ ಸಾಮರ್ಥ್ಯ ವ್ಯಕ್ತಗೊಂಡಿರುವುದು, ಮನುಷ್ಯ ಚೈತನ್ಯದ ಅದಮ್ಯತೆಗೆ ಪ್ರಖರ ಸಾಕ್ಷಿಯಾಗಿದೆ.

ಜನಸಾಮಾನ್ಯರಲ್ಲಿ ಸ್ವಾತಂತ್ರ್ಯಭಾವನೆ ಮತ್ತು ಆತ್ಮವಿಶ್ವಾಸಗಳನ್ನು ಉತ್ತೇಜಿಸಲು ತಮ್ಮ ವಿದ್ಯೆ ಪ್ರಭಾವಗಳನ್ನು ಬಳಸುವ ಕಾರ್ಯವನ್ನು ವಿದ್ಯಾವಂತ ಜನರು ಈಗ ಅಗತ್ಯವಾಗಿ ಬಹಳ ತುರ್ತಾಗಿ ಕೈಗೊಳ್ಳಬೇಕಾಗಿದೆ. ಪ್ರತಿಯೊಬ್ಬರ ಘನತೆಯನ್ನು ಗುರುತಿಸಿ ಗೌರವಿಸಿ, ಅವರಲ್ಲಿ ವಿದ್ಯೆ ಮತ್ತು ಸಂಸ್ಕೃತಿಯನ್ನು ಪಸರಿಸುವ ಕಾಯಕವನ್ನು ತಮ್ಮ ಕರ್ತವ್ಯವೆಂದು ಬಗೆಯುವ ಇಂತಹ ಪ್ರಜ್ಞಾವಂತರ ಸಂಖ್ಯೆ ಹೆಚ್ಚಿದಷ್ಟೂ, ನಾಗರಿಕ ಸಮಾಜವನ್ನು ಕಾಡುತ್ತಿರುವ ಶೋಷಣೆಯಂತಹ ಸಾಮಾಜಿಕ ಅನಿಷ್ಟಗಳು ತಾವಾಗಿಯೇ ದೂರವಾಗುತ್ತವೆ.

### ಆತ್ಮವಿಶ್ವಾಸದಿಂದ ಆತ್ಮಜಾಗೃತಿ

ಎಲ್ಲರಿಗೂ ಸಮಾನಾವಕಾಶಗಳನ್ನು ಕಲ್ಪಿಸುವ, ಅಮೆರಿಕದಲ್ಲಿರುವಂತಹ ಒಂದು ಸಾಮಾಜಿಕ ವಾತಾವರಣವನ್ನು ಕಲ್ಪಿಸಿಕೊಟ್ಟಾಗ, ದಮನಕ್ಕೊಳಗಾದವನು ತಾನು ಕಳೆದುಕೊಂಡ ಆತ್ಮಗೌರವವನ್ನು ಮತ್ತೆ ಸಂಪಾದಿಸಿಕೊಳ್ಳುತ್ತಾನೆ. ಇಂಥ ಸಹಜ ಪರಿವರ್ತನೆಯ ಒಂದು ಸುಂದರ ನಿದರ್ಶನವನ್ನು ಸ್ವಾಮಿ ವಿವೇಕಾನಂದರು ತಮ್ಮ ಒಂದು ಪತ್ರದಲ್ಲಿ ಹೀಗೆ ನಿರೂಪಿಸುತ್ತಾರೆ: "ನಾನು ನ್ಯೂಯಾರ್ಕಿನಲ್ಲಿ ವಲಸೆ ಬರುವ ಐರಿಷ್ ಜನಾಂಗದವರನ್ನು ನೋಡುತ್ತಿದ್ದೆ. ತುಳಿತಕ್ಕೊಳಗಾಗಿ ಜೋಲುಮುಖ ಹಾಕಿಕೊಂಡು, ತಮ್ಮ ಊರಿನಲ್ಲಿನ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿ, ಕೈಯಲ್ಲಿ ಒಂದೂ ಕಾಸಿಲ್ಲದೆ ದಡ್ಡರಂತಿದ್ದ ಅವರ ಆಸ್ತಿಯೆಲ್ಲ ಒಂದು ಕೋಲು, ಅದರ ಅಂಚಿನಲ್ಲಿ ಒಂದು ಚಿಂದಿಯ ಗಂಟು, ಕಾಲಿನಲ್ಲಿ ನಡುಕ, ಕಣ್ಣಿನಲ್ಲಿ ಅಂಜಿಕೆ – ಇವು ಮಾತ್ರ. (ಆದರೆ ನ್ಯೂಯಾರ್ಕಿಗೆ ಬಂದ) ಆರು ತಿಂಗಳಲ್ಲಿ ಅಂಥವನ ಚಹರೆಯೇ ಬದಲಾಗುತ್ತದೆ. ಸೆಟೆದು ನಿಂತು ಧೈರ್ಯಶಾಲಿಯಾಗಿ ಅವನು ಮುನ್ನಡೆಯುತ್ತಾನೆ. ಅವನ ಪೋಷಾಕು ಬದಲಾಯಿಸಿದೆ. ಅವನ ನೋಟದಲ್ಲಿ ಮತ್ತು ನಡಿಗೆಯಲ್ಲಿ ಈಗ ಅಂಜಿಕೆಯ ಸುಳಿವೇ ಇಲ್ಲ. ಇದಕ್ಕೆ ಕಾರಣವೇನು? ನಮ್ಮ ವೇದಾಂತ ಹೇಳುವುದೇನೆಂದರೆ ಆ ಐರ್ಲೆಂಡ್‌ನವನನ್ನು ಆತನ ಸ್ವಂತ ದೇಶದಲ್ಲಿ ತಾತ್ಸಾರದ ವಾತಾವರಣದಲ್ಲಿಟ್ಟಿದ್ದರು. ಸುತ್ತಲ ನಿಸರ್ಗವೆಲ್ಲವೂ ಒಕ್ಕೊರಲಿನಿಂದ, 'ಹೇ ನಿರ್ಭಾಗ್ಯ, ನಿನಗೆ ಯಾವ ಭವಿಷ್ಯವೂ ಇಲ್ಲ. ಗುಲಾಮನಾಗಿ ಹುಟ್ಟಿದೆ, ಗುಲಾಮನಾಗಿಯೇ ಇರುವೆ' ಎಂದು ಹೇಳುತ್ತಿತ್ತು. ತನ್ನ ಜನ್ಮದಾರಭ್ಯ ಇದನ್ನೇ ಕೇಳಿದ್ದರಿಂದ ಅವನು ಹಾಗೆಯೇ ನಂಬಿದನು; ತಾನು ಬಹಳ ಹೀನನೆಂದು ಮನಃಪೂರ್ತಿಯಾಗಿ ತಿಳಿಯುವುದಕ್ಕೆ ಪ್ರಾರಂಭಿಸಿದನು. ಅವನಲ್ಲಿದ್ದ ಭಗವಂತನ ಶಕ್ತಿ ಮುದುಡಿಕೊಳ್ಳತೊಡಗಿತು. ಆದರೆ, ಅವನು ಅಮೆರಿಕ ದೇಶಕ್ಕೆ ಕಾಲಿಟ್ಟ ತಕ್ಷಣವೇ ಎಲ್ಲೆಡೆಯಲ್ಲೂ, 'ಅಯ್ಯಾ, ನಮ್ಮಂತೆಯೇ ನೀನೂ ಮನುಷ್ಯ; ಮನುಷ್ಯನೇ ಈ ಎಲ್ಲ ಅದ್ಭುತವನ್ನೂ ಮಾಡಿರುವುದು; ನಿನ್ನಂತೆ, ನನ್ನಂತೆ ಇರುವ ಮನುಷ್ಯರು ಏನನ್ನು ಬೇಕಾದರೂ ಸಾಧಿಸಬಹುದು, ಧೈರ್ಯ ತಾಳು' ಎಂಬ ಕೂಗು ಅವನಿಗೆ ಕೇಳಲಾರಂಭಿಸಿತು. ಆ ಪೌರುಷದಿಂದ ಅವನು ತಲೆ ಎತ್ತಿ ನೋಡಿದನು. ಹೌದು, ಅದು ನಿಜವಾಗಿಯೂ ಹಾಗೆಯೇ ತೋರಿತು. ಅವನಲ್ಲಿದ್ದ ಭಗವಂತನು ಜಾಗೃತಗೊಂಡನು. ಇಡೀ ವಾತಾವರಣವೇ ಅವನಿಗೆ, 'ಏಳು, ಜಾಗೃತನಾಗು, ಗುರಿ ಸೇರುವವರೆಗೂ ನಿಲ್ಲದಿರು' ಎಂದು ಹೇಳುವಂತಿತ್ತು." **ಸ್ವಾಮಿ ವಿವೇಕಾನಂದರು ತೋರಿದ ಆತ್ಮಜಾಗೃತಿಯ ಈ ರಾಜಮಾರ್ಗ ಮಾತ್ರವೇ ಎಲ್ಲ ಬಗೆಯ ಶೋಷಣೆಗಳಿಗೂ ರಾಮಬಾಣವಾಗಬಲ್ಲುದು.. ಅಲ್ಲವೇ?**

# ಹಸಿವು ಮತ್ತು ಶೋಷಣೆ – ಆರ್ಥಿಕ ರಂಗದ ಪರಿಣಾಮಗಳು

**ಶೋಷಣೆಯ ವಿಶ್ಲೇಷಣೆ**

**ರಾಜೇಶ್ವರಿ ಕೃಷ್ಣ**



**ಭಾರತದಲ್ಲಿ ಕಂಡುಬರುವ ಹಸಿವು ಮತ್ತು ಶೋಷಣೆಗಳಿಗೆ ಮುಖ್ಯ ಕಾರಣ ಆರ್ಥಿಕ ಅಸಮಾನತೆ. ಇದರ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಪ್ರಭಾವಶಾಲಿಯಾಗಿ ಮಾಡಿರುವ ಲೇಖಕಿ ಬೆಂಗಳೂರಿನ ನಿವಾಸಿಗಳು. ಇವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಜೀವನಚರಿತ್ರೆ, ನಿರ್ವಹಣೆ ಮತ್ತು ಆರ್ಥಿಕ ರಂಗದ ಬಗ್ಗೆ ಹಲವಾರು ಪುಸ್ತಕಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ.**

**ದರಿದ್ರಾನ್ ಭಜ ಕೌಂತೇಯ ಮಾ ಯಚ್ಛೇಶ್ವರೇ ಧನಮ್ ।**
**ರೋಗಿಣಃ ಪಥ್ಯಮೌಷಧಂ ನೀರುಜಸ್ಯ ಕಿಮೌಷಧೈಃ ॥** (ನಾರಾಯಣ ಪಂಡಿತನ 'ಹಿತೋಪದೇಶ' ದಿಂದ)

"ಎಲೈ ಕುಂತೀಪುತ್ರನೇ! ನೀನು ಬಡವರ ಸೇವೆ ಮಾಡು, ಭಗವಂತನಿಗೆ ಧನಸಹಾಯ ಮಾಡಬೇಕಾಗಿಲ್ಲ. ಔಷಧಿಯ ಅಗತ್ಯವಿರುವುದು ರೋಗಿಗೇ ಹೊರತು ಆರೋಗ್ಯವಂತನಿಗಲ್ಲ."

ಸಾಮವೇದಕ್ಕೆ ಸೇರಿದ ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ (ಸದ್ವಿದ್ಯೆ) ಒಂದು ಪ್ರಕರಣ ಬರುತ್ತದೆ. ಶ್ವೇತಕೇತು ಆರುಣೇಯ ಎಂಬ ಯುವಕ ಹನ್ನೆರಡು ವರ್ಷಗಳ ಕಾಲ ವೇದಗಳನ್ನೆಲ್ಲ ಅಧ್ಯಯನ ಮಾಡಿಮುಗಿಸಿ, ತನ್ನ ತಂದೆ ಹಾಗೂ ಗುರುವಾಗಿದ್ದ ಉದ್ದಾಲಕ ಆರುಣಿಯ ಬಳಿಗೆ ಹಿಂತಿರುಗುತ್ತಾನೆ. ಆದರೆ ಅವನಲ್ಲಿ ಅಹಂಕಾರ ಕರಗಿರಲಿಲ್ಲ; ವಿನಯವೂ ಮೂಡಿರಲಿಲ್ಲ. ಇದನ್ನು ಕಂಡ ಉದ್ದಾಲಕ ಆರುಣಿಯು ಅವನಿಗೆ, ಬೇರೆ ಬೇರೆ ರೀತಿಯಲ್ಲಿ ಉಪದೇಶ (ಆತ್ಮದ ಏಕತ್ವದ ಬಗ್ಗೆ ಪ್ರತಿಪಾದನೆ) ಮಾಡುತ್ತಾನೆ. ಅದರ ಅಂಗವಾಗಿ, "ನೀನು ಹದಿನೈದು ದಿನಗಳವರೆಗೆ ಊಟ ಮಾಡಬೇಡ. ಆದರೆ ಬೇಕಾದಷ್ಟು ನೀರನ್ನು ಕುಡಿ" ಎಂದು ಆದೇಶಿಸುತ್ತಾನೆ. ನೀರನ್ನು ಕುಡಿಯುತ್ತಿದ್ದರೆ ಪ್ರಾಣ ಬಿಟ್ಟುಹೋಗುವುದಿಲ್ಲ. ಹೀಗೆಯೇ ಶ್ವೇತಕೇತು ಮಾಡುತ್ತಾನೆ. ಹದಿನೈದು ದಿನಗಳ ನಂತರ ತಂದೆಯ ಹತ್ತಿರ ಬರುತ್ತಾನೆ. ತಂದೆ ಅವನಿಗೆ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಹೇಳುವಂತೆ ಆದೇಶಿಸುತ್ತಾನೆ. ಆಗ ಶ್ವೇತಕೇತುವು, "ಭಗವಂತನೇ, ಅವು ನನಗೆ ತೋಚುವುದೇ ಇಲ್ಲ" ಎನ್ನುತ್ತಾನೆ. ನೀರನ್ನು ಕುಡಿದಿದ್ದರಿಂದ ಪ್ರಾಣವೇನೋ ಉಳಿದಿತ್ತು. ಆದರೆ ಊಟವಿಲ್ಲದೆ, ಶರೀರ ನಿತ್ರಾಣವಾಗಿತ್ತು. ಹೀಗಾಗಿ ಏನನ್ನೂ ಗ್ರಹಿಸಲಾಗುತ್ತಿರಲಿಲ್ಲ. ಆಗ ಉದ್ದಾಲಕ ಆರುಣಿಯು ಮಗನಿಗೆ, "ನೀನು ಊಟ ಮಾಡು. ನಂತರ ನನ್ನ ಮಾತುಗಳು ತಿಳಿಯುತ್ತವೆ" ಎನ್ನುತ್ತಾನೆ. ತಂದೆಯ ಅಪ್ಪಣೆಯಂತೆ ಊಟ ಮಾಡಿಬಂದ ಮೇಲೆ ತನ್ನ ತಂದೆ ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಗ್ರಹಿಸುವ ಶಕ್ತಿ ಶ್ವೇತಕೇತುವಿಗೆ ಮರಳಿಬರುತ್ತದೆ. ಆಗ ಆತನ ತಂದೆಯು, ಹೇಗೆ ಅನ್ನದಿಂದ ಮಾನಸಿಕ ಶಕ್ತಿ ಬೆಳೆಯುತ್ತದೆ ಎನ್ನುವುದನ್ನು ವಿವರಿಸುತ್ತಾನೆ. ಇಂಥ ಮಾನಸಿಕ ಶಕ್ತಿಯಿಂದಲೇ ಮನುಷ್ಯ, ಎಲ್ಲ ಕ್ರಿಯೆಗಳನ್ನೂ ಮಾಡಲು ಸಮರ್ಥನಾಗುತ್ತಾನೆ ಎಂದು ಈ ಉಪನಿಷತ್ತು ಸಾರುತ್ತದೆ. ಹೀಗೆ ಅನಾದಿಕಾಲದಿಂದ ಎಲ್ಲ ವರ್ಗದ ಜನರೂ ಹಸಿವಿನ ಪ್ರಖರತೆಯನ್ನೂ, ಊಟದ ಮಹತ್ವವನ್ನೂ ತಮ್ಮ ತಮ್ಮದೇ ಆದ ರೀತಿಯಲ್ಲಿ, ಅನುಭವದಲ್ಲಿ ಕಂಡುಕೊಂಡಿದ್ದಾರೆ. ಜೊತೆಜೊತೆಗೆ ಈ ಮೂಲಭೂತ ಅಗತ್ಯಗಳು ಬಡತನ, ಶೋಷಣೆಯಂತಹ ಬೃಹತ್ ಸಮಸ್ಯೆಗಳನ್ನೂ ಹುಟ್ಟುಹಾಕಿವೆ ಎನ್ನುವುದೂ ಕಟುಸತ್ಯ.

## ಸಾರ್ವತ್ರಿಕ ಸಮಸ್ಯೆಗಳು

ಈಗಲೂ ನಮ್ಮ ದೇಶದ ಬೇರೆ ಬೇರೆ ಭಾಗಗಳ ಹಿಂದುಳಿದ ಪ್ರದೇಶಗಳಲ್ಲಿ, ಹಸಿವು–ಶೋಷಣೆಗಳು ತಾಂಡವವಾಡುತ್ತಿರುವುದನ್ನೂ ('ಬಡತನ' ಮತ್ತು 'ಹಸಿವು' ಒಂದೇ ನಾಣ್ಯದ ಎರಡು ಮುಖಗಳಂತೆ ಇವೆ) ಅವುಗಳ ಘೋರ ಪರಿಣಾಮಗಳನ್ನೂ ನಾವು ಕಾಣಬಹುದು. ದಶಕಗಳಿಂದ ಆಹಾರ–ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದ್ದುಕೊಂಡು 'ಸುಭಿಕ್ಷ'ವಾಗಿದ್ದ ಭಾರತ, ಇತ್ತೀಚಿನ ವರ್ಷಗಳಲ್ಲಿ ಇವುಗಳ 'ಕೊರತೆ'ಯನ್ನು ಅನುಭವಿಸುತ್ತಿದೆ. ಹೀಗಾಗಿ ಹಸಿದ ಹೊಟ್ಟೆಗಳ ಹಾಹಾಕಾರ ಮುಗಿಲುಮುಟ್ಟಿದೆ; ಅಭಿವೃದ್ಧಿ ತೆವಳುತ್ತ ಸಾಗಿದೆ. ಇನ್ನು ಶೋಷಣೆಯ ಬಗ್ಗೆ ಹೇಳುವುದೇ ಬೇಡ. ಮನುಷ್ಯ ಜಗತ್ತಿನಲ್ಲಿ ಶೋಷಣೆಯ ಪ್ರವೃತ್ತಿಯು ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾಗಿದೆ. 'ಶೋಷಿಸುವುದು' ಎಂದರೆ ಸಂಸ್ಕೃತದಲ್ಲಿ 'ಒಣಗಿಸುವುದು' ಎಂಬ ಅರ್ಥವಿದೆ. ಶೋಷಣೆಗೆ ಒಳಗಾದವರು ತಮ್ಮ ಅಸ್ತಿತ್ವದ ಎಲ್ಲ ಮುಖಗಳಲ್ಲೂ ನೆಮ್ಮದಿಯನ್ನು ಕಳೆದುಕೊಂಡು ಒಣಗಿ ಹೋಗುತ್ತಾರೆ. ಇಂತಹ ಶೋಷಣೆ ದೈಹಿಕವಾಗಿರಬಹುದು, ಬೌದ್ಧಿಕ ಅಥವಾ ಮಾನಸಿಕವಾಗಿರಬಹುದು. ದುಡಿಮೆಯ ಲಾಭ ಪಡೆಯುವಾತ ದುಡಿಯುವವನನ್ನು, ಶ್ರೀಮಂತನಾದವನು ಬಡವನನ್ನು, ಬಲಿಷ್ಠನು ಬಲಹೀನನನ್ನು ಶೋಷಿಸುತ್ತಾನೆ. ಜಾತಿ–ಧರ್ಮಗಳ, ಪಕ್ಷ–ಪಂಥಗಳ ಹೆಸರಿನಲ್ಲಿ ಶತಮಾನಗಳಿಂದ ಶೋಷಣೆ ನಡೆಯುತ್ತಲೇ ಇದೆ. ಮನುಷ್ಯರನ್ನು ವಸ್ತುಗಳಂತೆ, ಪಶುಗಳಂತೆ ಪರಿಗಣಿಸಿ ಮಾರಾಟ ಮಾಡುತ್ತಿದ್ದ ಗುಲಾಮಗಿರಿ ಪದ್ಧತಿಯನ್ನು ಶೋಷಣಾಪ್ರವೃತ್ತಿಯ ಪರಾಕಾಷ್ಠೆ ಎನ್ನಬಹುದು.

## ಅಸಮಾನತೆಯೇ ಮುಖ್ಯ ಕಾರಣ

ನಮ್ಮ ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಅವಲೋಕಿಸಿದಾಗ, 'ಅಸಮಾನತೆ'ಯೇ (inequality of opportunity) ಶೋಷಣೆಗೆ ಮುಖ್ಯಕಾರಣ ಎನ್ನುವುದು ವೇದ್ಯವಾಗುತ್ತದೆ. ಈ ಅಸಮಾನತೆಯಿಂದಲಾಗಿ 'ಶ್ರೇಷ್ಠ-ಕನಿಷ್ಠ' ಎಂಬ ತಾರತಮ್ಯ ಹುಟ್ಟಿಕೊಳ್ಳುತ್ತದೆ. 'ಮೇಲು' ಎನ್ನಿಸಿಕೊಳ್ಳುವ ವ್ಯಕ್ತಿಯಲ್ಲಿ ಸ್ವಾರ್ಥ-ಕ್ರೌರ್ಯ ಸೇರಿಕೊಂಡು, ಆತ 'ಕೆಳಗಿರುವವನನ್ನು' ಶೋಷಿಸುತ್ತಾನೆ. ಒಟ್ಟಿನಲ್ಲಿ ದುರ್ಬಲರೇ ಶೋಷಿತರು. **ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವ ಚ ನೈವ ಚ । ಅಜಾತಪುತ್ರಂ ಬಲಿಂ ದದ್ಯಾತ್ ದೇವೋ ದುರ್ಬಲಘಾತಕಃ ॥** ಎನ್ನುತ್ತದೆ ಒಂದು ಸುಭಾಷಿತ. ಇದರ ಅರ್ಥ, "ಕುದುರೆಯನ್ನಲ್ಲ, ಆನೆಯನ್ನಲ್ಲ, ಹುಲಿಯನ್ನಂತೂ ಖಂಡಿತ ಅಲ್ಲ! ಮೇಕೆ ಮರಿಯನ್ನೇ ಬಲಿಯಾಗಿ ಕೊಡಬೇಕು. ದೇವರು ದುರ್ಬಲರನ್ನೇ ಕೊಲ್ಲುತ್ತಾನೆ!" ಎಂದು. ಬಗ್ಗುವವರ ಬೆನ್ನ ಮೇಲೆ ಗುದ್ದು ಬೀಳದಿರಬೇಕಾದರೆ ಅವರು ಸೆಟೆದು ನಿಲ್ಲಬೇಕು. 'ಶೋಷಣೆ'ಯ ವ್ಯಾಧಿಗೆ ಪ್ರತಿಭಟನೆಯೇ ಮದ್ದು. ಮೂಲತಃ ಎಲ್ಲ ಬಗೆಯ ಶೋಷಣೆಯ ವಿರುದ್ಧ ಧ್ವನಿ ಎತ್ತಿದ ಸ್ವಾಮಿ ವಿವೇಕಾನಂದರು, ಜಾತಿ ಪದ್ಧತಿಯನ್ನೂ, ಅಸ್ಪೃಶ್ಯತೆಯನ್ನೂ ನೇರ ನುಡಿಗಳಲ್ಲಿ ಖಂಡಿಸಿ, ಇವು ನಮ್ಮ ಆರ್ಥಿಕ, ಸಾಮಾಜಿಕ ಹಾಗೂ ವೈಚಾರಿಕ ಪ್ರಗತಿಯನ್ನು ಕುಗ್ಗಿಸಿವೆ ಎಂದು ತಿಳಿಹೇಳಿದರು. ಒಂದು ಕಡೆ ಅವರು ಮನಮಿಡಿಯುವ ಹಾಗೆ ಹೀಗೆ ನುಡಿದಿದ್ದಾರೆ : "ಈ ದುಡಿಯುವ ವರ್ಗವು ಮೌನವಾಗಿ ದೇಶವನ್ನು ಕಟ್ಟುತ್ತಿದೆ. ನಾಲ್ಕು ಧರ್ಮಗ್ರಂಥಗಳನ್ನು, ಕೆಲವು ಮಹಾವಾಕ್ಯಗಳನ್ನು ಬರೆದು ಬಿಟ್ಟರೆ ಆಯಿತೆ? ಓ ದುಡಿಯುವ ವರ್ಗವೇ, ನಿಮಗೆ ತಲೆಬಾಗುತ್ತೇನೆ." ಇದನ್ನೇ ರವೀಂದ್ರನಾಥ ಠಾಕೂರರು ತಮ್ಮ 'ಗೀತಾಂಜಲಿ' ಕವನ ಸಂಕಲನದಲ್ಲಿ ಹೀಗೆ ಹೇಳಿದ್ದಾರೆ : **"... ಬಿಸುಡಾಚೆ ನಿನ್ನ ಮಡಿ ಬಟ್ಟೆಗಳ; ಇಳಿದು ಬಾ, ಅವನಂತೆ ನಿನಗೂ ದುಡಿಮೆಯೇ ದೇವರಾಗಲಿ!"** (ಅನುವಾದ : *ಪ್ರೊ. ಎಚ್. ಕೆ. ರಾಮಚಂದ್ರಮೂರ್ತಿ*)

## ಹಲವು ಕಾರಣಗಳು

ಹಸಿವು-ಶೋಷಣೆಗಳಂಥ ಜ್ವಲಂತ ಸಮಸ್ಯೆಗಳಿಗೆ ನಮ್ಮ ಅರ್ಥವ್ಯವಸ್ಥೆಯ ಹಿನ್ನೆಲೆಯಲ್ಲಿ ಕೆಲವು ಕಾರಣಗಳನ್ನು ಹೀಗೆ ಗುರುತಿಸಬಹುದು:

೧. ಜಾಗತೀಕರಣದ, ಉದಾರೀಕರಣದ ಹೆಸರಿನಲ್ಲಿ ಪ್ರವೇಶಿಸಿದ ಬಂಡವಾಳೀಕರಣದಿಂದಾಗಿ ನಮ್ಮ ಕೃಷಿಪ್ರಧಾನ ದೇಶವು ಉದ್ಯಮಪ್ರಧಾನ ದೇಶವಾಗಿ ರೂಪಾಂತರಗೊಳ್ಳುತ್ತಿದೆ. ಇದು, ಸಾಮೂಹಿಕ ಉತ್ಪಾದನೆಯನ್ನು ಆಧರಿಸಿದ ಕೈಗಾರಿಕೆಗಳಿಗಿಂತ ಭಿನ್ನವಾಗಿದ್ದು, ಈ ಸ್ಥಿತ್ಯಂತರವು ಹೊಸ ಹೊಸ ಬಿಕ್ಕಟ್ಟುಗಳನ್ನು ಸೃಷ್ಟಿಸಿದೆ. ಈ ವೈರುಧ್ಯಗಳ ಮಧ್ಯೆ ಬಡ ರೈತನು ತತ್ತರಿಸುತ್ತಿದ್ದಾನೆ. ಇದು ಹತ್ಯೆ-ಆತ್ಮಹತ್ಯೆಗಳಿಗೂ ದಾರಿಮಾಡಿಕೊಟ್ಟಿದೆ.

೨. ಶೋಷಣೆಯ ಇನ್ನೊಂದು ಮುಖವಾದ, ಉಳ್ಳವರ ಆಸ್ತಿ-ಅಧಿಕಾರ-ಅಸ್ತಿತ್ವದ ಹೋರಾಟದಲ್ಲಿ 'ಕಾಳ ಸಂತೆ', 'ಕಪ್ಪು ಹಣ' ತಾಂಡವವಾಡುತ್ತಿವೆ. ಮನುಷ್ಯನ ಅತಿಯಾಸೆ, ಹಣಗಳಿಕೆಯ ಸುಲಭದ ದಾರಿಗಳು ಅವನನ್ನು ಭ್ರಷ್ಟನನ್ನಾಗಿಸಿವೆ. ಇದಲ್ಲದೆ ವ್ಯವಸ್ಥೆಯೇ ವ್ಯಕ್ತಿಗಳನ್ನು ಭ್ರಷ್ಟರನ್ನಾಗಿಸುವ ಹೀನ ಪರಿಸ್ಥಿತಿಯೂ ನಮ್ಮಲ್ಲಿ ನಿರ್ಮಾಣವಾಗಿದೆ. ಇಲ್ಲಿ ಸುಳ್ಳು ಸತ್ಯವಾಗುತ್ತಿದೆ, ಸತ್ಯ ಸುಳ್ಳಾಗುತ್ತಿದೆ. ಹಸಿವು-ಶೋಷಣೆಗಳನ್ನು ಮೆಟ್ಟಿ, ನ್ಯಾಯಮಾರ್ಗದಲ್ಲಿ ಕನಿಷ್ಠ ಮಟ್ಟದ ಜೀವನ ನಡೆಸಲೂ ಅವಕಾಶವಾಗದಿದ್ದಾಗ, ಮನುಷ್ಯನು ಹಣಗಳಿಕೆಯ ಅಡ್ಡದಾರಿಗಳನ್ನು ಸಹಜವಾಗಿಯೇ ಹಿಡಿಯುತ್ತಾನೆ.

೩. ಇನ್ನೊಂದೆಡೆ ರಾಜಕಾರಣಿ-ಉದ್ಯಮಿ-ಅಧಿಕಾರಿಗಳ ನಡುವಣ 'ನಂಟು' ದಿನೇ ದಿನೇ ಹೆಚ್ಚಾಗುತ್ತಲಿದ್ದು, ಅದನ್ನು ತಡೆಹಿಡಿಯಲು ಸಾಧ್ಯವಾಗುತ್ತಿಲ್ಲ. ಮತ್ತು ಯಾವ ರೀತಿಯ 'ವಿಚಾರಣೆ'ಗಳೂ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಮುಗಿಯುವುದಿಲ್ಲ. ಇವು ಭ್ರಷ್ಟಾಚಾರದ ವಿಪರೀತ ಬೆಳವಣಿಗೆಗೆ ಕಾರಣಗಳಾಗಿವೆ. ನೈತಿಕ ಮತ್ತು ಧಾರ್ಮಿಕ ಮೌಲ್ಯಗಳು ಸಂಸ್ಥಾಪನೆಯಾಗುವವರೆಗೂ ಭ್ರಷ್ಟಾಚಾರದ ಬೇರುಗಳನ್ನು ಕಿತ್ತುಹಾಕುವುದು ಸಾಧ್ಯವಿಲ್ಲ. ವ್ಯಕ್ತಿಯ ನೈತಿಕ ದೃಢತೆಯೊಂದೇ ಎಲ್ಲ ಸನ್ನಿವೇಶಗಳಲ್ಲಿಯೂ ಆತನನ್ನು ಭ್ರಷ್ಟಗೊಳಿಸದಂತೆ ತಡೆಯಬಲ್ಲುದು.

೪. ಅನೇಕ ವೇಳೆ, ಸರ್ಕಾರ ಹಮ್ಮಿಕೊಳ್ಳುವ ಬಡತನ ನಿರ್ಮೂಲನಾ ಯೋಜನೆಗಳು ಮತ್ತು ಅನುದಾನಗಳು ನಿಜವಾಗಿ ಅಗತ್ಯವಿರುವ ಜನರಿಗೆ ತಲುಪುವುದೇ ಇಲ್ಲ. ಅಥವಾ ಅನೇಕ ಭ್ರಷ್ಟ ಕೈಗಳನ್ನು ದಾಟಿ, ಸೋರುತ್ತ ತಲುಪುತ್ತವೆ. ಎಷ್ಟೋ ವೇಳೆ, ಅಸ್ತಿತ್ವವೇ ಇರದ ಸಂಸ್ಥೆಗಳಿಗೆ ಅನುದಾನಗಳು ಬಿಡುಗಡೆಯಾಗುತ್ತವೆ. ಇದೇ ರೀತಿ, ಹಲವಾರು ಸರಕು-ಸೇವೆಗಳಿಗೆ ಸರ್ಕಾರ ನೀಡುವ 'ಸಹಾಯಧನ' ದುರ್ಬಳಕೆಯಾಗುತ್ತದೆ. ಒಟ್ಟಿನಲ್ಲಿ, ನಮ್ಮ ದೇಶದ ಅರ್ಥವ್ಯವಸ್ಥೆಯಲ್ಲಿ ಮೂಲ ಸೌಕರ್ಯಗಳ ಹಾಗೂ ಮೂಲಭೂತ ಅಗತ್ಯಗಳ ಪೂರೈಕೆಯೇ ಒಂದು ದೊಡ್ಡ ಬಿಕ್ಕಟ್ಟಿನ ವಿಷಯವಾಗಿಬಿಟ್ಟಿದೆ.

೫. ನಮ್ಮ ಸರ್ಕಾರಗಳಿಗೆ, ಹಸಿವು-ಶೋಷಣೆಗಳೇ ಮೊದಲಾದ ಮೂಲಭೂತ ಸಮಸ್ಯೆಗಳ ನಿವಾರಣೆಯಂತಹ ಜನಪರ ನೀತಿಗಿಂತ, ಜನಲೋಲುಪತೆಯ ಕಾರ್ಯಕ್ರಮಗಳ ಬಗ್ಗೆಯೇ ಆಸಕ್ತಿ ಹೆಚ್ಚಾಗಿದೆ. ಇಂಥ ಸನ್ನಿವೇಶದಲ್ಲಿ 'ಬೆಲೆ ಸೂಚ್ಯಂಕ', 'ಹಣದುಬ್ಬರದ ಭೂತ' – ಇವುಗಳ ನಿಯಂತ್ರಣವು 'ಕೇಂದ್ರಬ್ಯಾಂಕಿನ ಹಣಕಾಸು ನೀತಿ' ಅಥವಾ 'ಸರ್ಕಾರದ ರಾಷ್ಟ್ರೀಯ ಆಹಾರ ಸುಭದ್ರತಾ ಮಸೂದೆ' ಯಂತಹ ಅಲ್ಪಕಾಲೀನ ಕ್ರಮಗಳಿಂದ ಮಾತ್ರವೇ ಸಾಧ್ಯವಾಗದು.

೬. ಜನಸಂಖ್ಯಾ ಪ್ರಮಾಣ ಹೆಚ್ಚಿದಂತೆ, ಕೆಲವು ಹೊಸ ಸಮಸ್ಯೆಗಳು ಇತ್ತೀಚಿನ ವರ್ಷಗಳಲ್ಲಿ ಸ್ಪಷ್ಟರೂಪ ತಳೆಯುತ್ತಿವೆ – ಪರಿಸರ ಮಾಲಿನ್ಯ ಹಾಗೂ ಸಂಪನ್ಮೂಲಗಳ ನಾಶ, ಗಣಿಗಾರಿಕೆಯಿಂದ ಉಂಟಾಗುವ ನೈಸರ್ಗಿಕ ವಿಕೋಪಗಳು, ವಿವಿಧ